**Code No. 18 Z**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

## ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ

ಜುಲೈ, 2015

ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

I. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಒಂದಕ್ಕೆ*** ಮಾತ್ರ ಉತ್ತರಿಸಿ : 1 × 15 = 15

1. ಶೀಘ್ರಲಿಪಿಯಲ್ಲಿ ದ್ವಿರೂಪ ವ್ಯಂಜನ 'ರ' ಉಪಯೋಗಿಸುವ ವಿಧಾನಗಳನ್ನು ಉದಾಹರಣೆ ಸಹಿತ ವಿವರಿಸಿ.

***ಅಥವಾ***

2. ಅರ್ಧ ವೃತ್ತಗಳನ್ನು ಉಪಯೋಗಿಸುವ ವಿಧಾನಗಳನ್ನು ಉದಾಹರಣೆ ಸಹಿತ ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಮೂರಕ್ಕೆ*** ಟಿಪ್ಪಣಿ ಬರೆಯಿರಿ : 3 × 5 = 15

1. ಎಡರೂಪ 'ತ–ದ'
2. ಊರ್ಧ್ವಮುಖ ಹಾಗೂ ಅಧೋಮುಖ "ಯ" ಪ್ರಯೋಗ
3. ಇಮ್ಮಡಿ ರೇಖಾಕ್ಷರದ ಅಂತ್ಯ ಪ್ರತ್ಯಯಗಳು
4. ವರ್ಣಪದಗಳು
5. ದ್ವಿ ಸ್ವರಗಳು ಮತ್ತು ತ್ರಿ ಸ್ವರಗಳು

III. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಸಂಕ್ಷೇಪ ರೂಪದ ಪದಗಳನ್ನು ಬರೆಯಿರಿ : 5 × 2 = 10

1. ಪ್ರದೇಶ – ಪ್ರದೋಶ
2. ಆಹಾರ ದಿನಸುಗಳು – ಹಾರ ಧಾನ್ಯಗಳು
3. ಸಾಲಗಳನ್ನು – ಸಲಹೆಗಳನ್ನು
4. ಮುಂಜಾಗ್ರತೆ – ಮುಂಜಾಗರೂಕತೆ
5. ಸರದಾರ – ಸಾರೋದ್ದಾರ
6. ಪರಿವರ್ತನೆ – ಪ್ರವರ್ತನೆ
7. ತರುಣ – ದಾರುಣ

[ Turn over

IV. ಈ ಕೆಳಗಿನ ಪದಗಳಿಗೆ ಸಂಕ್ಷೇಪ ರೂಪದ ರೇಖಾಕ್ಷರಗಳನ್ನು ಬರೆಯಿರಿ : 5 × 1 = 5

1. ಆದರ್ಶಪ್ರಾಯ
2. ಉದ್ದಟತನ
3. ಕ್ರಿಸ್ತಪೂರ್ವ
4. ವರ್ಣಾಶ್ರಮಧರ್ಮ
5. ಹಿತಚಿಂತಕ

V. ಈ ಕೆಳಗಿನ ಪದಗಳಿಗೆ ಪದಸಮೂಹವನ್ನು ಬರೆಯಿರಿ : 5 × 1 = 5

1. ಸಂತಾಪ ಸೂಚಕ ನಿರ್ಣಯ
2. ಹಿಂದುಳಿದವರು
3. ಸಲಹಾ ಮಂಡಳಿ
4. ಹೋದ ವರ್ಷಕ್ಕಿಂತ
5. ಶುಭಸ್ಯಶೀಘ್ರಂ

VI. ಈ ಕಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ : 50

ಮಾನ್ಯ ಹಣಕಾಸಿನ ಮಂತ್ರಿಗಳು ಆಯವ್ಯಯ ಪತ್ರವನ್ನು ಸಭೆಯಲ್ಲಿ ಮಂಡಿಸುತಾ ಈ ಕೆಳಕಂಡಂತ ಭಾಷಣ ಮಾಡಿದರು.

ಕೃಷಿಕರು ಹೆಚ್ಚು ಹೆಚ್ಚಾಗಿ ಜಾಗೃತರಾದಂತೆಲ್ಲಾ ನೆರವಿನ ಬಗೆಗೆ ಬೇಡಿಕೆ ಹೆಚ್ಚುತ್ತಾ ಹೋಗುವುದು. ಹೀಗಾಗಿ ಕೃಷಿ ವಲಯದಲ್ಲಿ ಸಾಲದ ಅಂತರವು ಹೆಚ್ಚಾಗುವುದರಲ್ಲಿ ಅನಿವಾರ್ಯವಾಗುವುದು. ಸಹಕಾರಿ ಸಂಘಗಳ ಮತ್ತು ಬ್ಯಾಂಕುಗಳ ಉತ್ಸಾಹಪೂರಿತ ಹಾಗೂ ಸುಸಂಘಟಿತ ಪ್ರಯತ್ನ ಪರಂಪರೆಗಳಿಂದ ಈ ಅಂತರವನ್ನು ತುಂಬಿಕೊಂಡರೆ ಕೃಷಿರಂಗದ ಕ್ರಾಂತಿಯು ತಾನಾಗಿಯೇ ಕೈಗೂಡುವುದು. ಕೆಲವು ಕ್ಷೇತ್ರಗಳಿಂದ ಬರಬೇಕಾದ ಹಣ ವಸೂಲಾಗದೇ ಭಾರಿ ಮೊತ್ತದ ಹಣ ಬಾಕಿ ನಿಂತಿರುವುದರಿಂದ ಸಾಲ ಬರುವುದಕ್ಕೆ ಬಹಳ ತೊಂದರೆಯಾಗಿ ಆರ್ಥಿಕ ಅಭಿವೃದ್ಧಿ ಯೋಜನೆಗೆ ಹಣ ಸಹಾಯ ಮಾಡುವ ನಾನಾ ಸಂಸ್ಥೆಗಳು ಒದಗಿಸುವ ಸೌಲಭ್ಯಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳುವುದರ ಮಹತ್ತ್ವವನ್ನು ನಾನು ಒತ್ತಿ ಹೇಳಬೇಕಾಗಿಲ್ಲ.

ಹಣ್ಣು ಹಂಪಲು, ತರಕಾರಿ ತೋಟಗಳು ಇತ್ಯಾದಿ ಅಭಿವೃದ್ಧಿ ವಿಚಾರದಲ್ಲಿ ತೋಟಗಾರಿಕೆ ಇಲಾಖೆಯೂ ಸಹ ಸಾಕಷ್ಟು ಪ್ರಗತಿ ಸಾಧಿಸಿದೆ. ಸುಧಾರಿತ ವಿಧಾನಗಳ ಬಗೆಗೆ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಲಾಯಿತು. ಆಬಾಲ ವೃದ್ಧರ ಯೋಗಕ್ಷೇಮಕ್ಕಾಗಿ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಉದ್ಯಾನವನಗಳನ್ನು ಉತ್ತಮ ದರ್ಜೆಯ ವಿಹಾರ ಕೇಂದ್ರಗಳನ್ನಾಗಿ ಮಾರ್ಪಡಿಸುವ ಯೋಜನೆಗಳನ್ನು ಹಂತ ಹಂತವಾಗಿ ಕೈಗೊಳ್ಳುವ ಕಾಮಗಾರಿಗಳಿಗೆ ಬೇಕಾಗುವ ಹಣವನ್ನು ಈ ಆಯವ್ಯಯದಲ್ಲಿ ಒದಗಿಸಲು ನಾನು ಪ್ರಯತ್ನಿಸುತ್ತೇನೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವು ಈಗ ಉಚಿತವಾಗಿರುವುದರಿಂದಲೂ, ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚ ವರ್ಷೇ ವರ್ಷೇ ಅಧಿಕವಾಗುತ್ತಿರುವುದರಿಂದಲೂ, ವಿದ್ಯಾ ಇಲಾಖೆಯ ಆಯವ್ಯಯ ಪತ್ರದಲ್ಲಿ ಸಹಾಯ ಪೋಷಿತ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾ ಸಂಸ್ಥೆಗಳಿಗೆ ಇನ್ನಷ್ಟು ಹೆಚ್ಚಿನ ಅನುದಾನ ಕೊಡಲು ಸರ್ಕಾರ ಏರ್ಪಾಡು ಮಾಡಿದೆ. ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ನೀಡುವ ವ್ಯವಸ್ಥೆಯ ಜೊತೆಗೆ ಮಾಧ್ಯಮಿಕ ಶಾಲೆಗಳಿಗೆ ಜಾಗೃತಿಕ ಆಹಾರ ಕಾರ್ಯಕ್ರಮದ ಪ್ರಕಾರ ಒದಗಿಸಲಾಗುವುದು. ಆಟದ ಬಯಲುಗಳ ಮತ್ತು ಇತರ ಖಾಲಿ ಜಾಗದ ಸಂರಕ್ಷಣೆಗೆ ಶಾಸನ ರಚಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ. ಇದು ಕಾರ್ಯಗತವಾದರೆ, ಅಂಗಸಾಧನೆ ಹಾಗೂ ಕ್ರೀಡೆಗಳಿಗೆ ಸಾಕಷ್ಟು ಸ್ಥಳ ಒದಗುವುದಿದೆ. ಸಹಾಯ ಪೋಷಿತ ಮಾಧ್ಯಮಿಕ ಶಾಲೆಗಳ ಎಲ್ಲ ಅಧ್ಯಾಪಕರ ವೇತನವನ್ನು ತಾವೇ ಸಲ್ಲಿಸುವ ಹೊಣೆಯನ್ನು ಸರ್ಕಾರದವರು ವಹಿಸಿಕೊಂಡಿದ್ದಾರೆ.

ಹಿಂದುಳಿದ ವರ್ಗದವರ ಕಲ್ಯಾಣ ಸಾಧನೆಗಾಗಿ ನೇಮಕವಾದ ಏಕ ಸದಸ್ಯ ಸಮಿತಿಯು ಇತ್ತೀಚೆಗೆ ಮಾಡಿದ ಶಿಫಾರಸ್ಸುಗಳಿಗನುಸಾರವಾಗಿ ವಿದ್ಯಾರ್ಥಿ ನಿಲಯಗಳ ಸುಧಾರಣೆಗೂ ಶಿಕ್ಷಣ ಸೌಲಭ್ಯಗಳಿಗೂ ಹೆಚ್ಚು ಹಣ ನೀಡಲಾಗಿದೆ. ಹರಿಜನ–ಗಿರಿಜನರಿಗೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಮತ್ತು ಕೃಷಿ ಸಹಕಾರ ಸಂಘಗಳ ಸದಸ್ಯರಾಗುವುದಕ್ಕೂ ಹಾಗೂ ನೀರಾವರಿಗಾಗಿ ಸಾಲ ಪಡೆಯುವುದಕ್ಕೂ ಅನುಕೂಲವಾಗುವಂತೆ ಅವರಿಗೆ ಪ್ರಾರಂಭದ ಶುಲ್ಕ, ಅನ್ವೇಷಣ ಶುಲ್ಕ ಮುಂತಾದ ಶುಲ್ಕಗಳನ್ನು ಪಾವತಿ ಮಾಡುವುದಕ್ಕೆ ಬೇಕಾಗುವ ಆರ್ಥಿಕ ನೆರವು ನೀಡಲು ಒಂದು ಯೋಜನೆಯನ್ನು ಮಂಜೂರು ಮಾಡಲಾಗಿದೆ. ಯುವಜನ ಕಲ್ಯಾಣವು ಸರ್ಕಾರದವರ ಹೆಚ್ಚಿನ

[ Turn over

ಗಮನಕ್ಕೆ ಪಾತ್ರರಾಗುವುದಕ್ಕೆ ಪ್ರತ್ಯೇಕವಾದ ಒಂದು ಯೋಜನಾ ಕಲ್ಯಾಣ ಇಲಾಖೆ ರಚಿತವಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಕ್ರೀಡೆಗಳು, ಅನುದಾನಗಳು ಇತ್ಯಾದಿ ಯುವಜನ ಕಲ್ಯಾಣಾರ್ಥವಾದ ನಾನು ಏರ್ಪಾಡುಗಳಿಗೆ ಸರ್ಕಾರದವರು ಒಂದು ಕೋಟಿ ರೂಪಾಯಿ ವೆಚ್ಚದ ಒಂದು ವ್ಯಾಪಕ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ.

ಸರ್ಕಾರದವರು ತಮ್ಮ ಸಂಪನ್ಮೂಲಗಳಿಗೆ ತಕ್ಕಂತೆ ನೌಕರರ ಹಿತಕ್ಕೆ ಸಹಾನುಭೂತಿ ಪೂರ್ಣ ಗಮನವನ್ನು ಸದಾ ನೀಡಿದ್ದಾರೆ. ವೇತನ ಪ್ರಮಾಣಗಳನ್ನು ತುಟ್ಟಿ ಭತ್ಯ, ನಗರ ಪರಿಹಾರ ಭತ್ಯ ಮತ್ತು ಮನೆ ಬಾಡಿಗೆ ಭತ್ಯಗಳ ವಿಚಾರವಾಗಿ ವೇತನ ಆಯೋಗದ ಸಲಹೆಗಳನ್ನು ಕಾರ್ಯಗತ ಮಾಡುವ ನಿರ್ಧಾರ ಕೈಗೊಂಡಿದ್ದರೂ ಸಹ ಈ ನಿಮಿತ್ತವಾಗಿ ರಾಜ್ಯ ಸರ್ಕಾರಗಳ ಆರ್ಥಿಕ ಹೊರೆ ಹೆಚ್ಚಾಗದಂತೆ ನೋಡಿಕೊಳ್ಳುವ ಬಗ್ಗೆ ಸಮಗ್ರ ರಾಷ್ಟ್ರಕ್ಕೆ ಅನ್ವಯಿಸತಕ್ಕ ಸೂಕ್ತ ಕಾರ್ಯ ನೀತಿಯನ್ನು ಅಳವಡಿಸಿಕೊಳ್ಳಬೇಕೆಂದು ಭಾರತ ಸರ್ಕಾರಕ್ಕೂ ಏಳನೆಯ ಆರ್ಥಿಕ ಆಯೋಗಕ್ಕೂ ಒತ್ತಾಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಇದುವರೆಗೆ ಕೈಗೂಡಿದ ಸಾಧನೆಗಳನ್ನು ಉಳಿಸಿಕೊಳ್ಳುವುದಕ್ಕೆ ಅಲ್ಲದೇ ಒಳ್ಳೆಯ ಭವಿಷ್ಯ ಬರುವುದೆಂಬ ಆಸೆಯನ್ನು ಕುದುರಿಸುವುದಕ್ಕೂ ಸಹ ಅತ್ಯವಶ್ಯವಾದ ಯೋಜನೆಗಳಿಗೆ ಕನಿಷ್ಠ ಪ್ರಮಾಣದ ಸರ್ಕಾರಿ ವೆಚ್ಚಕ್ಕೆ ನಾವು ಅವಕಾಶ ಕಲ್ಪಿಸಬೇಕು. ದಂದು ವೆಚ್ಚವನ್ನು ತಪ್ಪಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ಈ ಸದನಕ್ಕೂ, ಭಾರತ ಸರ್ಕಾರದವರಿಗೂ ನಾನು ಭರವಸೆ ಕೊಡಬಲ್ಲೆ. ಈ ಆಯವ್ಯಯ ಪತ್ರದ ಸಲಹೆಗಳನ್ನು ತಾವು ಸಾವಧಾನವಾಗಿ ಪರಿಶೀಲಿಸಿದಲ್ಲಿ ಯೋಜನೇತರ ಮತ್ತು ಅನುತ್ಪಾದಕ ಕಾರ್ಯಗಳ ವೆಚ್ಚ ಮಾಡಿರುವ ಹಣ ವ್ಯವಸ್ಥೆ ಕೇವಲ ಕನಿಷ್ಠ ಪ್ರಮಾಣದ್ದೆಂಬ ಅಂಶ ತಮಗೆ ಮನದಟ್ಟಾಗುವುದು. ಈ ವರ್ಷದ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿ, ಅನುಮೋದಿಸಬೇಕೆಂದು ಕೋರುತ್ತೇನೆ.